## ಮೈಸೂರು ಇತಿಹಾಸದ ಮರೆತ ಪುಟಗಳು

# ಮಹಾರಾಣಿ ಸತ್ಯಪ್ರೇಮಕುಮಾರಿ ದೇವಿ

**ಜನಪರ ಆಡಳಿತ ಮತ್ತು ಆಶಯಗಳ ಮೂಲಕ ಜನಮನದಲ್ಲಿ ಉಳಿದಿರುವ ಜಯಚಾಮರಾಜ ಒಡೆಯರ್ ಅವರ ವೈಯಕ್ತಿಕ ಬದುಕಿನಲ್ಲಿ ಏರುಪೇರುಗಳಿದ್ದವು. ಮಹಾರಾಣಿ ಸತ್ಯಪ್ರೇಮಕುಮಾರಿ ದೇವಿ ಜೊತೆಗಿನ ಅವರ ದಾಂಪತ್ಯ ಅಲ್ಪಾಯುಷಿಯಾಗಿತ್ತು. ಸತ್ಯಪ್ರೇಮಕುಮಾರಿ ಅವರು ಮೈಸೂರು ಸಂಸ್ಥಾನದಲ್ಲಿ ಇದ್ದುದು ಕಡಿಮೆ ಕಾಲವಾದರೂ, ಜನರ ಅಭಿಮಾನ–ಗೌರವಕ್ಕೆ ಪಾತ್ರರಾಗಿದ್ದರು.**

■ ಡಿ.ಜಿ. ಮಲ್ಲಿಕಾರ್ಜುನ



ಮಹಾರಾಣಿ ಸತ್ಯಪ್ರೇಮಕುಮಾರಿ ದೇವಿಯವರು ಬೆಂಗಳೂರಿಗೆ ರೋಸ್ ಮಾರ್ಸ್ ಅವರ ಬ್ಯಾಲೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬಂದಾಗಿನ ಚಿತ್ರ (28 ನೇ ನವೆಂಬರ್ 1976)

ಮೈಸೂರಿನ ಜಯಚಾಮರಾಜ ಒಡೆಯರ್ ಅವರ ಶತಮಾನೋತ್ಸವದ ವರ್ಷಾಚರಣೆಯನ್ನು ರಾಜ್ಯದ ಹಲವೆಡೆ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಮಹಾರಾಜರ ಜೀವನದಲ್ಲಿ ರಾಜವೈಭೋಗದ ಸುಖ–ಸಂಪತ್ತಿನಲ್ಲಿ ಮೆರೆಯುವ ಅವಕಾಶ ಸಿಕ್ಕರೂ 'ಅರಮನೆ ಎನ್ನುವುದು ಜನಮನೆ, ಜನರೇ ನಮ್ಮ ಪ್ರಭುಗಳು' ಎನ್ನುವ ಧ್ಯೇಯದೊಂದಿಗೆ ಆಡಳಿತ ನಡೆಸಿದ್ದು ಯದುವಂಶದ ರಾಜಮನೆತನ. ಜನರಿಗಾಗಿ ರಸ್ತೆ, ಮಂಟಪ, ದೇಗುಲ, ಕೆರೆಕಟ್ಟೆಗಳನ್ನು ನಿರ್ಮಿಸಿಕೊಡುವ ಮೂಲಕ ಸೇವಾ ಕಾರ್ಯವನ್ನು ಧರ್ಮ ಕಾರ್ಯ ಎಂದು ಭಾವಿಸಿದವರು ಮೈಸೂರಿನ ಅರಸರು. ಈ ಕಾರಣಕ್ಕಾಗಿಯೇ ರಾಜಮನೆತನದೊಂದಿಗೆ ಜನರ ಭಾವನಾತ್ಮಕ ಸಂಬಂಧ ಬೆಳೆಯಿತು. ಜನರಿಗೆ ಕಷ್ಟ ಬಂದರೆ ರಾಜರು ಸುಮ್ಮನಿರುತ್ತಿರಲಿಲ್ಲ; ಅಂತೆಯೇ ರಾಜರಿಗೆ ಕಷ್ಟ ಬಂದರೆ ಜನರು ಕೂಡ ಕಣ್ಣೀರು ಹಾಕುತ್ತಿದ್ದರು.

ಅರಮನೆಗಳಲ್ಲಾದ ಸಂಕಷ್ಟಗಳಿಗೆ ಜನ ಮರುಗಿದ್ದಾರೆ. ಸಂತೋಷ–ಸುಖಕ್ಕೆ ಆನಂದಪಟ್ಟಿದ್ದಾರೆ.

ಜಯಚಾಮರಾಜ ಒಡೆಯರ್ ಮಹಾರಾಜರಾಗಿ, ಓರ್ವ ರಾಜಕೀಯ, ಸಂಗೀತ ತಜ್ಞರಾಗಿ, ಸಾಮಾಜಿಕ ಕಳಕಳಿಯುಳ್ಳ ಜ್ಞಾನಿಯಾಗಿ ಸಾರ್ಥಕ ಜೀವನ ನಡೆಸಿದವರು. ತಂದೆ ನರಸಿಂಹರಾಜ ಒಡೆಯರ್ ನಿಧನರಾದ ಐದು ತಿಂಗಳಲ್ಲೇ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊನೆಯುಸಿರೆಳೆದರು. ಆವರೆಗೆ ಯುವರಾಜರಾಗಿದ್ದ ಜಯಚಾಮರಾಜ ಒಡೆಯರ್ ತಮ್ಮ 21ನೇ ವಯಸ್ಸಿಗೆ ಮಹಾರಾಜರಾಗಿ ಅಧಿಕಾರಕ್ಕೆ ಬಂದು